**ಪ್ರಧಾನ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**

**ಓ ಎಸ್ 65/2023**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ದಿನಾಂಕಃ 16-06-2025** **ಪಿ ಡಬ್ಲ್ಯೂ 1**

**ಮುಂದುವರೆದ ಪಾಟೀ ಸವಾಲುಃ** 1 ರಿಂದ 5 ನೇ ಪ್ರತಿವಾದಿ ಪರ ವಕೀಲರಿಂದಃ

ದಾವಾ ಶೆಡ್ಯೂಲ್ ಆಸ್ತಿ ಸರ್ವೆ ನಂ. 135/3 ರಲ್ಲಿನ 11 ಎಕರೆ 4 ಗುಂಟೆ ಜಮೀನಿನ ಪೈಕಿ ಒಂದು ಭಾಗ ಎಂದರೆ ಸರಿ. ದಾವಾ ಆಸ್ತಿ ಪ್ರತಿವಾದಿ 1 ರಿಂದ 4 ರವರ ತಂದೆಯವರ ಹಿಸ್ಸೆಗೆ ಹೋದ ಜಮೀನನ್ನು ಹೊರತುಪಡಿಸಿದ ಉಳಿದ 5 ಎಕರೆ 7 ಗುಂಟೆ ಜಮೀನು ಎಂದರೆ ಸರಿಯಲ್ಲ. ಉಳಿದ 5 ಎಕರೆ 7 ಗುಂಟೆ ಜಮೀನು 1 ನೇ ವಾದಿಯ ತಂದೆಯ ಹಿಸ್ಸೆಗೆ ಹೋಗಿರುತ್ತದೆ ಎಂದರೆ ಸರಿಯಲ್ಲ. ಈ ಪ್ರಕಾರವಾಗಿ 1980-81 ನೇ ಸಾಲಿನಲ್ಲಿ ವಾದಿಯರ ತಂದೆಯವರ ಹೆಸರಿಗೆ 5 ಎಕರೆ 7 ಗುಂಟೆ ಮತ್ತು ಪ್ರತಿವಾದಿಯರ ತಂದೆಯವರ ಹೆಸರಿಗೆ 5 ಎಕರೆ 37 ಗುಂಟೆ ಖಾತಾ ಬದಲಾವಣೆ ಆಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಅದನ್ನು ಸೃಷ್ಟಿ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಯ ತಂದೆ ಉಜ್ಜಪ್ಪ ತೀರಿಕೊಂಡ ನಂತರ ದಾವಾ ಆಸ್ತಿಯಲ್ಲಿನ ಅರ್ಧ ಬಾಗ 1 ನೇ ಪ್ರತಿವಾದಿಯ ಹೆಸರಿಗೆ ಆಗಿರುತ್ತದೆ ಎಂದರೆ ಸಾಕ್ಷಿಯು ಅದನ್ನು ಸೃಷ್ಟಿ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಇನ್ನುಳಿದ ಅರ್ಧ ದಾವಾ ಆಸ್ತಿಯಲ್ಲಿ ತಿಪ್ಪಣ್ಣನ ಮಕ್ಕಳಾದ 2 ರಿಂದ 4 ನೇ ಪ್ರತಿವಾದಿಯರು ಪಾಲು ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಅದನ್ನು ಸೃಷ್ಟಿ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಪಾಲು ವಿಭಾಗದ ಬಗ್ಗೆ ನೋಂದಣಿ ಮಾಡಿಸಿಕೊಂಡಿದ್ದಾರೆ ಎಂದರೆ ಸಾಕ್ಷಿಯು ನಮ್ಮ ಗಮನಕ್ಕೆ ಬಾರದಂತೆ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ.

1 ನೇ ವಾದಿಯ ತಂದೆ ರುದ್ರಪ್ಪನವರಿಗೆ ಇಬ್ಬರು ಹೆಂಡತಿಯರು ಎಂದರೆ ಸರಿ. ಹನುಮಂತಪ್ಪ ಮೊದಲನೇ ಹೆಂಡತಿ ಮಗ ಎಂದರೆ ಸರಿ. 1983-84 ರಲ್ಲಿ ರುದ್ರಪ್ಪನವರ ಹಿಸ್ಸೆಗೆ ಬಂದ ಆಸ್ತಿ 5 ಎಕರೆ 7 ಗುಂಟೆ ಜಮೀನನ್ನು ಪಾಲು ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಈ ಪ್ರಕಾರ ರುದ್ರಪ್ಪನವರಿಗೆ 3 ಎಕರೆ 7 ಗುಂಟೆ ಮತ್ತು ಹನುಮಂತಪ್ಪನವರಿಗೆ 2 ಗುಂಟೆ ಜಮೀನು ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಈ ಪ್ರಕಾರ ಮ್ಯುಟೇಶನ್ ಖಾತೆಯಾಗಿದೆ ಎಂದರೆ ನನಗೆ ಮಾಹಿತಿ ಇಲ್ಲ. ರುದ್ರಪ್ಪನ ಪಾಲಿಗೆ ಬಂದ 3 ಎಕರೆ 7 ಗುಂಟೆ ಜಮೀನಿನಲ್ಲಿ ಎರಡನೇ ಹೆಂಡತಿ ಮಕ್ಕಳು ಪಾಲು ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ಸರಿ. ಈ ಪ್ರಕಾರ ಮ್ಯುಟೇಶನ್ ಖಾತಾ ಬದಲಾವಣೆ ಆಗಿದೆ ಎಂದರೆ ಸರಿ. 1,2,4 ಮತ್ತು 5 ವಾದಿಯರು ಸದರಿ ರುದ್ರಪ್ಪನ ಎರಡನೇ ಹೆಂಡತಿ ಮಕ್ಕಳು ಎಂದರೆ ಸರಿ. ಸದರಿ ವಾದಿ 1,2,4 ಮತ್ತು 5 ರವನ್ನು ಹೊರತುಪಡಿಸಿ ವೀರಭದ್ರಪ್ಪ, ಸೋಮಪ್ಪ ಮತ್ತು ಗಂಗಮ್ಮ ಎಂದು ಇನ್ನು 3 ಜನ ಮಕ್ಕಳು ಇದ್ದರು ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸದರಿಯವರು ತೀರಿಕೊಂಡಿರುತ್ತಾರೆ

ಎಂದು ನುಡಿಯುತ್ತಾರೆ. ಸದರಿಯವರ ಮಕ್ಕಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ರುದ್ರಪ್ಪನ ಮೊದಲನೇ ಹೆಂಡತಿಯ ಮಗ ಹನುಮಂತಪ್ಪನವರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ.

ನಿಪಿ.3 ರಂತೆ ಇರುವ ಉಪವಿಭಾಗಾಧಿಕಾರಿಗಳ ನ್ಯಾಯಾಲಯ, ದಾವಣಗೆರೆ ಇವರ ಆದೇಶವನ್ನು 40 ವರ್ಷಗಳ ನಂತರ ಅದರ ವಿರುದ್ಧ ಅಪೀಲು ಸಲ್ಲಿಸಿದ್ದೇವೆ ಎಂದರೆ ಸರಿ. ಸದರಿ ಆದೇಶದ ನಂತರ ನಿಪಿ.9 ರಂತೆ ಜಿಲ್ಲಾಧಿಕಾರಿಗಳ ನ್ಯಾಯಾಲಯ ದಾವಣಗೆರೆ ಇವರ ಆದೇಶವಾಗಿರುತ್ತದೆ ಎಂದರೆ ಸರಿ. ಸದರಿ ಆದೇಶಗಳನ್ನು ಪ್ರಶ್ನಿಸಿ ಪ್ರತಿವಾದಿಯರು ಮಾನ್ಯ ಉಚ್ಚ ನ್ಯಾಯಾಲಯಕ್ಕೆ ರಿಟ್ ಅರ್ಜಿಯನ್ನು ಸಲ್ಲಿಸಿರುತ್ತಾರೆ ಮತ್ತು ಅದರಲ್ಲಿ ನಮಗೆ ನೋಟಿಸ್ ಜಾರಿಯಾಗಿರುತ್ತದೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ಮಧ್ಯಂತರ ತಡೆಯಾಜ್ಞೆ ಆಗಿರುತ್ತದೆ ಎಂದರೆ ಗೊತ್ತಿಲ್ಲ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಸದರಿ ದಾಖಲೆ ರಿಟ್ ಪಿಟಿಷನ್ ನಂ. 32315/2024 ರವರ ಮಧ್ಯಂತರ ಆದೇಶದ ಪ್ರತಿಯಾಗಿದ್ದು ಸಾಕ್ಷಿಯು ಅದನ್ನು ಗುರುತಿಸಲು ನಿರಾಕರಿಸಿರುತ್ತಾರೆ. ನಿಪಿ.3 ರಂತೆ ಇರುವ ಉಪವಿಭಾಗಾಧಿಕಾರಿಗಳ ನ್ಯಾಯಾಲಯ, ದಾವಣಗೆರೆ ಇವರ ಆದೇಶದಂತೆ 2022 ರಲ್ಲಿ ಪ್ರತಿವಾದಿಯರ ಹೆಸರನ್ನು ಅದರಲ್ಲಿ ತೆಗೆದುಹಾಕಿ ವಾದಿಯರ ಹೆಸರನ್ನು ಸೇರ್ಪಡೆ ಮಾಡಿರುತ್ತಾರೆ ಎಂದರೆ ಸರಿ. ಈ ಪ್ರಕಾರ ಪಹಣಿ ಪತ್ರಿಕೆಯಲ್ಲಿ ಖಾತಾ ಬದಲಾವಣೆ ಮಾಡಿಕೊಂಡ ನಂತರ ವಾದಿಯರಿಗೆ ದಾವಾ ಆಸ್ತಿಯನ್ನು ಬಿಟ್ಟುಕೊಡಲು ಕೇಳಿದ್ದೆವು ಎಂದರೆ ಸರಿಯಲ್ಲ. ದಾವಾ ಆಸ್ತಿ ನಮ್ಮ ಹೆಸರಿಗೆ ಇದೆ ಸ್ವಾಧೀನ ಕೊಡಿ ಎಂದು ಪ್ರತಿವಾದಿಯರ ವಿರುದ್ಧ ಪೊಲೀಸ್ ಠಾಣೆಗೆ ದೂರು ಸಹ ನೀಡಿದ್ದೆವು ಎಂದರೆ ಸರಿ. ಆಗ ಪೊಲೀಸರು ಇದು ಸಿವಿಲ್ ವ್ಯಾಜ್ಯ ಎಂದು ನಮ್ಮ ಪ್ರಕರಣವನ್ನು ದಾಖಲಿಸಿಕೊಳ್ಳಲಿಲ್ಲ ಎಂದರೆ ಸರಿ. 1980-81 ನೇ ಸಾಲಿನಿಂದ 2022 ರವರೆಗೆ ದಾವಾ ಸ್ವತ್ತಿನ ದಾಖಲೆಗಳನ್ನು ಪ್ರತಿವಾದಿಯರ ಹೆಸರು ಇತ್ತು ಎಂದರೆ ಸರಿಯಲ್ಲ. 1980-81 ನೇ ಸಾಲಿನಿಂದಲೂ ಪ್ರತಿವಾದಿಯರ ಪ್ರತ್ಯಕ್ಷ ಸ್ವಾಧೀನ ಇದೆ ಎಂದರೆ ಸರಿಯಲ್ಲ. ಪ್ರತಿವಾದಿಯರು ದಾವಾ ಆಸ್ತಿಯಲ್ಲಿ ಬ್ಯಾಂಕಗಳಿಂದ ಸಾಲ ಪಡೆದು ಮತ್ತು ತೀರಿಸುತ್ತಾ ಬಂದಿದ್ದಾರೆ ಎಂದರೆ ಸಾಕ್ಷಿಯು ನಮ್ಮ ಅಜ್ಜನ ಗಮನಕ್ಕೆ ಬರದೇ ಮಾಡಿಕೊಂಡು ಬಂದಿದ್ದಾರೆ ಎಂದು ನುಡಿಯುತ್ತಾರೆ. ಈ ದಾವೆಯಲ್ಲಿ ಪ್ರತಿವಾದಿಯರು ನಮ್ಮ ಮಾಲೀಕತ್ವ ಮತ್ತು ಸ್ವಾಧೀನತೆಯನ್ನು ಪ್ರಶ್ನಿಸಿ ತಕರಾರು ಸಲ್ಲಿಸಿರುತ್ತಾರೆ ಎಂದರೆ ಸರಿ. ದಾವಾ ಆಸ್ತಿಯ ಮೇಲೆ ವಾದಿಯರಿಗೆ ಯಾವುದೇ ಹಕ್ಕು ಮತ್ತು ಹಿತಾಸಕ್ತಿ ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿ ಪ್ರತಿವಾದಿಯರ ಆಸ್ತಿ ಎಂದು ತಿಳಿದಿದ್ದರೂ ಸಹ ದುರುದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ ಉಳಿದ ವಾದಿಯರ ಮಾತು ಕೇಳಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/

ಪ್ರಧಾನ ಸಿವಿಲ್ ನ್ಯಾಯಾಧೀಶರು

ಮತ್ತು ಜೆ ಎಂ ಎಫ್ ಸಿ, ಹರಿಹರ